ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯತ್ ರಾಮನಗರ

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಪಂಚಾಯತ್ ಭವನ, ಬಿ.ಎಂ. ರಸ್ತೆ, ರಾಮನಗರ**

ಸಂ.ರಾಜಿಪಂ/DRDA/SBM(G)/MRF/ವಂದಾರಗುಪ್ಪೆ/ಸಿಆರ್-384/2023-24 ದಿನಾಂಕ:13.01.2025

**ಗೆ,**

ಸಹಾಯಕ ಕಾರ್ಯಪಾಲಕ ಅಭಿಯಂತರರು,
ಬೆಸ್ಕಾಂ, ಬೇವೂರು ವಿಭಾಗ,
ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

**ಮಾನ್ಯರೇ,**

**ವಿಷಯ:** ಚನ್ನಪಟ್ಟಣ ತಾಲ್ಲೂಕಿನ ವಂದಾರಗುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೌಳಿದೊಡ್ಡಿ ಗ್ರಾಮದಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ (MRF) ನೀಡಿರುವ ವಿದ್ಯುತ್ ಸಂಪರ್ಕವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ಬಗ್ಗೆ.

**ಉಲ್ಲೇಖ:** ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಕುನೀ&ನೈ ಉಪವಿಭಾಗ, ಚನ್ನಪಟ್ಟಣ ರವರ ಪತ್ರ ಸಂಖ್ಯೆ: ಸಕಾಅ/ಗ್ರಾಕುನೀ&ನೈಉವಿ/ಚ/2024-25/ 123, ದಿನಾಂಕ:21.12.2024.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಚನ್ನಪಟ್ಟಣ ತಾಲ್ಲೂಕಿನ ವಂದಾರಗುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೌಳಿದೊಡ್ಡಿ ಗ್ರಾಮದಲ್ಲಿ ಜಿಲ್ಲಾ ಪಂಚಾಯಿತಿ ವತಿಯಿಂದ ನಿರ್ಮಿಸಿರುವ ಘನ ತ್ಯಾಜ್ಯ ವಿಲೇವಾರಿ ಘಟಕವು (MRF) ದಿನಾಂಕ:16.10.2024ರಂದು ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದ ಅನಾಹುತ ಉಂಟಾಗಿ ಘಟಕವು ಸಂಪೂರ್ಣ ಬೆಂಕಿಗೆ ಆಹುತಿಯಾಗಿದ್ದು, ಸದರಿ ದಿನದಂದು ಬೆಸ್ಕಾಂ ಕಛೇರಿಯಿಂದ ನಿಮ್ಮ ಸಿಬ್ಬಂದಿಗಳು ಆಗಮಿಸಿ ಘಟಕಕ್ಕೆ ಒದಗಿಸಿರುವ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿರುತ್ತಾರೆ. ಅಲ್ಲದೇ ನಾವು ಸಹ ನಿಮ್ಮ ಸಿಬ್ಬಂದಿಗೆ ಮುಂದಿನ ಆದೇಶದವರೆಗೆ (ಘಟಕವು ಪುನರಾರಂಭವಾಗುವವರೆಗೆ) ತಾತ್ಕಲಿಕವಾಗಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಬಾರದೆಂದು ತಿಳಿಸಲಾಗಿರುತ್ತದೆ. ಅದರೆ ಘಟಕಕ್ಕೆ ವಿದ್ಯುತ್ ಸಂಪರ್ಕವಿಲ್ಲದಿದ್ದರೂ ಸಹ ವಿದ್ಯುತ್ ಬಿಲ್ ಸಲ್ಲಿಸಿರುತ್ತಾರೆ. ಈ ವಿಚಾರವಾಗಿ ಉಲ್ಲೇಖಿತ ಪತ್ರದಲ್ಲಿಯೂ ಸಹ ಸದರಿ ಘಟಕಕ್ಕೆ ನೀಡಿರುವ ವಿದ್ಯುತ್ ಸಂಪರ್ಕವನ್ನು ತಾತ್ಕಲಿಕವಾಗಿ ಸ್ಥಗಿತಗೊಳಿಸುವಂತೆ ತಿಳಿಸಲಾಗಿದ್ದರೂ ಸಹ ಪ್ರತಿ ಮಾಹೆ ನಿಮ್ಮ ಸಿಬ್ಬಂದಿ ವಿದ್ಯುತ್ ಬಿಲ್ಲನ್ನು ನೀಡುತ್ತಿರುತ್ತಾರೆ. ಆದುದರಿಂದ ಸದರಿ ವಿಷಯಕ್ಕೆ ಕುರಿತಂತೆ ತಾವು ಮೇಲೆ ತಿಳಿಸಿದ ಘಟಕವು ಪುನರಾರಂಭವಾಗುವರೆವಿಗೂ ಹಾಗೂ ನಮ್ಮ ಮುಂದಿನ ಆದೇಶದವರೆವಿಗೂ ಘಟಕಕ್ಕೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ ವಿದ್ಯುತ್ ಬಿಲ್ ನೀಡದಿರುವಂತೆ ಸೂಚಿಸಿದೆ.

**ಲಗತ್ತು**: ಉಲ್ಲೇಖಿತ ಪತ್ರ

**ತಮ್ಮ ವಿಶ್ವಾಸಿ,**

**Signed by Chikkasubbaiah**
**Date: 15-01-2025 12:41:51**

ಮುಖ್ಯ ಯೋಜನಾಧಿಕಾರಿ,
ಜಿಲ್ಲಾ ಪಂಚಾಯತ್ ರಾಮನಗರ.

**ಪ್ರತಿಯನ್ನು:**

1. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರಾಮನಗರ ರವರ ಆಪ್ತಶಾಖೆಗೆ ಮಾಹಿತಿಗಾಗಿ.
2. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ವಿಭಾಗ, ರಾಮನಗರ ಜಿಲ್ಲೆ ರವರ ಸೂಕ್ತ ಕ್ರಮಕ್ಕಾಗಿ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಕುನೀ&ನೈ ಉಪವಿಭಾಗ, ಚನ್ನಪಟ್ಟಣ ರವರಿಗೆ ರವಾನಿಸುತ್ತಾ ಮುಂದಿನ ದಿನಗಳಲ್ಲಿ ಘಟಕಕ್ಕೆ ವಿದ್ಯುತ್ ಬಿಲ್ ಬಂದಲ್ಲಿ ನಮ್ಮ ಗಮನಕ್ಕೆ ತರುವುದು.
4. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಚನ್ನಪಟ್ಟಣ ರವರ ಮಾಹಿತಿಗಾಗಿ.
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ವಂದಾರಗುಪ್ಪೆ ಗ್ರಾಮ ಪಂಚಾಯಿತಿ ರವರ ಮಾಹಿತಿಗಾಗಿ.
6. ಕಛೇರಿ ಪ್ರತಿ.